International Journal of Kannada Research
www.kannadajournal.com

ISSN: 2454–5813
IJKR 2019; 5(1): 151-152
© 2019 IJKR
www.kannadajournal.com
Received: 07-11-2018
Accepted: 10-12-2018

**ಶಂಕರಯ್ಯ ಎಮ್. ಎಸ್**
ಅಸಿಸ್ಟೆಂಟ್ ಪ್ರೊಫೆಸರ್,
ಗೋಫಾಲನ್ ಕಾಲೇಜ್ ಆಫ್
ಕಾಮರ್ಸ್, ಸೊನ್ನೇನಹಳ್ಳಿ,
ಬೆಂಗಳೂರು

**Correspondence**
**ಶಂಕರಯ್ಯ ಎಮ್. ಎಸ್**
ಅಸಿಸ್ಟೆಂಟ್ ಪ್ರೊಫೆಸರ್,
ಗೋಫಾಲನ್ ಕಾಲೇಜ್ ಆಫ್
ಕಾಮರ್ಸ್, ಸೊನ್ನೇನಹಳ್ಳಿ,
ಬೆಂಗಳೂರು

# ಕಣವಿಯ ಕಣಿವೆಯಲ್ಲಿ ಜೀವನ ದರ್ಶನ

**ಶಂಕರಯ್ಯ ಎಮ್. ಎಸ್**

ಕನ್ನಡ ಸಾರಸ್ವತ ಲೋಕ ಸಮೃದ್ದಿಯಾಗಿ ಇಂದು ಎದೆಯುಬ್ಬಿಸಿ ನಿಂತಿರುವುದಕ್ಕೆ ಅಗಣ್ಯ ಕವಿಗಳ ಬೌದ್ಧಿಕ ಎರಕವೆ ಸಾಕ್ಷೀಭೂತವಾಗಿದೆ. ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ ಆನೇಕ ಮಜಲುಗಳು ಪ್ರತಿ ಹಂತದಲ್ಲೂ ಸಾಹಿತಿಗಳ ಸಾಹಿತ್ಯ ಪ್ರೌಢಿಮೆ ಅಗಮ್ಯ ಜಗತ್ತು ಆಧುನಿಕಗೊಂಡಂತೆಲ್ಲ ವ್ಯಕ್ತಿಯ ಸಮಾಜಿಕ ಸ್ತರದಲ್ಲಿ ಆನೇಕ ಬದಲಾವಣೆಗಳು ಕಂಡುಬಂದವು. ಈ ಹಂತಗಳಲ್ಲಿ ಕನ್ನಡ ಪ್ರೌಢಿಮೆಗಳು ಇತಿಹಾಸ ಮರೆಯದೆ ಭವಿಷ್ಯದ ಎಚ್ಚರಿಕೆಗಳನ್ನು ಪ್ರಸ್ತುತದ ಸಾಮಾಜಿಕ ಜೀವನ ಸರಿದಾರಿಯಲ್ಲಿ ನೆಡೆಯಲು ಪ್ರಯತ್ನಿಸಿದ್ದಾರೆ. 'ದೇಶ ಸುತ್ತು ಇಲ್ಲ ಕೋಶ ಓದು' ಎಂಬ ಗಾದೆಯ ತಾತ್ಪರ್ಯದಂತೆ ಎಲ್ಲರಿಗೂ ಲೋಕಾನುಭವ ಪಡೆಯಲು ಕಷ್ಟವಾದರೂ ಸಾಹಿತ್ಯಾನುಭವದಿಂದ ಜೀವನದರ್ಶನ ಪಡೆಯಲು ಕನ್ನಡ ಸಾಹಿತಿಗಳ ಸಾಹಿತ್ಯ ದರ್ಶನ ಉಚಿತವೆನಿಸುತ್ತದೆ. ಈ ನಿಟ್ಟಿನಲ್ಲಿ 'ಓ ನನ್ನ ಚೇತನ ಆಗು ನೀ ಅನಿಕೇತನ' ಎಂದೂ ಮೊದಲು ಮಾನವನಾಗು ಎಂದು ಮಾನವ ಗುಣಧರ್ಮಗಳನ್ನು ತಿಳಿಸಿದ ಕುವೆಂಪುರಂತ ಮಹಾನ್ ಚೇತನಗಳು ಸ್ಮರಣೀಯ.

ಈ ನಿಟ್ಟಿನಲ್ಲಿ ತಮ್ಮ ಬದುಕು–ಬರಹಗಳ ಮೂಲಕ ಸಾಮಾಜಿಕ ಬದುಕಿಗೆ ಒಂದು ಘನತೆಯನ್ನು ತಂದು ಕೊಟ್ಟಿರುವ ಚನ್ನವೀರ ಕಣವಿಯವರು ಕನ್ನಡ ಸಂಸ್ಕ್ರತಿಗೆ ಹೆಮ್ಮೆ. ಪ್ರಸ್ತುತ ಸಾಮಾಜಿಕ ಅಸಮಾನತೆ, ಭ್ರಷ್ಟ ಪರಿಸರದಲ್ಲಿ ಮನುಷ್ಯನ ಮಾನವತ್ವದ ಬಗೆಗಿನ ನಂಬಿಕೆಗಳನ್ನು ಕಾಪಾಡುತ್ತಿರುವಂತ ಕಣವಿಯವರ ಲೇಖನಗಳು ಶ್ಲಾಘರಾರ್ಹವಾಗಿದೆ. ಕಣವಿಯವರ ಕನ್ನಡ ಸಾಹಿತ್ಯದ ಆನೇಕ ಪರಿವರ್ತನಶೀಲ ಘಟ್ಟಗಳನ್ನು ಹಾದು ಬಂದಿದ್ದಾರೆ. ಎಲ್ಲ ಬಗೆಯ ಚಳುವಳಿಗಳೂ, ಸಿದ್ಧಾಂತಗಳನ್ನು ಕಂಡು ಸೂಕ್ಷ್ಮಸ್ಪಂದನ ಕಂಡರೂ ತಮ್ಮ ಸಾಹಿತ್ಯ ಕೃಷಿಯಲ್ಲಿ ಮೂಲ ತಿಳಿದಿಕೊಳ್ಳಲು ಸಮಾಜ ಮಂಕಾಗಿರುವ ಬಗೆಗೆ ಕಣವಿಯವರ ಆತಂಕ ಹಾಗೂ ಆಶಯ ಇಲ್ಲಿ ಮನೋಜ್ಞವಾಗಿದೆ. ಮಾನವ ತನ್ನ ಬದಕುನ್ನು ಯಾಂತ್ರಿಕಗೊಳಿಸಿಕೊಳ್ಳುತ್ತಿದ್ದಾನೆ. ಮುಖವಾಡಕ್ಕೆ ಭಾವನೆಗಳ ಹೊಳಪು ಇರುವುದಿಲ್ಲ. ತನ್ನ ಅಂತರಾತ್ಮದ ಸತ್ಯತೆಯ ಕನ್ನಡಿಯನ್ನು ನೈಜವಾಗಿ ಹೊರಹಾಕಲು ಬಯಸದೆ ಶ್ರೇಷ್ಟತೆ, ಪ್ರತಿಷ್ಟೆಗಳ ಸೋಗಿನಲಿ ನಾಟಕೀಯವಾಗಿ ದರ್ಶಿಸುತ್ತಿದ್ದಾನೆ. ಇದರಿಂದ ಅಂತರಾವಲೋಕಿಸಿದರೆ ಬದುಕು ಅರ್ಥಪೂರ್ಣಗೊಳ್ಳೂವುದಿಲ್ಲ. ಮನುಷ್ಯ ಎಡವದೆ ಬೀಳದೆ ಮರ ಎಡವಿ ಬೀಳುವುದೇ? ನಮ್ಮಲ್ಲಿನ ನಡೆ–ನುಡಿಗಳಲ್ಲಿ ದೋಷ–ದೌರ್ಬಲ್ಯಗಳು, ಕುಂದು ಕೊರತೆಗಳು ಸಹಜವಾಗಿ ಪ್ರತಿನಿಧಿಸುತ್ತವೆ. ಆದರೆ ಅವುಗಳನ್ನು ಪ್ರತಿಷ್ಟೆಯ ಸೋಗಿನಲ್ಲಿ ಆದರ್ಶದ ಮುಖವಾಡ ಧರಿಸುವ ಬದಲು ನೈಜತೆಯ ಸರಳ ಬದುಕು ಅರ್ಥಪೂರ್ಣವೆನಿಸುತ್ತದೆ. ಮುಕ್ತಿಯು ಮುಕ್ತತೆಯಲ್ಲಿರದೆ ಮೂಡಾಚರಣೆಗಳ ಅಸ್ಪಷ್ಟತೆಯ ಗೌಮ್ಯಚಾರಣೆಯಲ್ಲಿ ನಿಂತಿದೆ. ತಾವೂ ಪವಿತ್ರರು ಎನ್ನುವ ಆಚಾರಕರ ನಾನೆಂಬ ಅಹಂ ನಲ್ಲಿ ಮುಳಗಿ ಅಸಂಬದ್ದವಾಗಿದ್ದಾರೆ. ಇವರಿಗೆ ಭಿನ್ನ ಸಾಮಾನ್ಯನಲ್ಲಿ, ಆದರೆ ಸಾಮಾನ್ಯಸ; ಆಕರ್ಷಣೆ, ಅಸಂಬದ್ಧತೆ, ಅಸಾಂಗತ್ಯ ತೆರೆಯಾದರೆ ಸಂತನೆನಿಸಿಕೊಳ್ಳುವಲ್ಲಿ ಗೌಪ್ಯವಾಗಿರುತ್ತದೆ.

ಮನುಷ್ಯ ಸದಾ ಗೆಲುವಿನ ಬಿಸಿಲುಕುದುರೆ ಏರಲು ಹೊರಟವನು. ಅದರಲ್ಲಿ ಇಂದು ಕಾರ್ಯ ಆರಂಭಕ್ಕುಮುನ್ನ ಅಂತ್ಯದ ಬಗೆಗೆ ಚಿಂತಿಸುವವನಾಗಿದ್ದಾನೆ. ಜೀವನದ ಮೇಲೆ ಮನುಷ್ಯನಿಗಿರಬೇಕಾದ ಬದ್ಧತೆ, ಅಚಲ ಮನೋಭಾವ, ಪ್ರಾಮಾಣಿಕ ಪ್ರಯತ್ನ, ತಾಳ್ಮೆ, ಸಮ್ಯಕ್‌ಜ್ಞಾನ ಕಾಣಿಸದೆ ಅನಾಯಾಸದ ಅಪಯಶಸ್ಸುಗಳ ದಾಸನಾಗಿದ್ದಾನೆ. ನಮ್ಮ ಮನೋದೌರ್ಬಲ್ಯಗಳನ್ನು ಕಳೆದು ಸದೃಢ ಮನಸ್ಕರಾಗಬೇಕು. ಪ್ರತಿಷ್ಟೆಗಳ ಮಾಯಗೆ ಸಿಲುಕದೆ ಸರಳ ಪಾರದರ್ಶಕದ ಜೀವನಕ್ಕೆ ಮುಖಮಾಡಿದರೆ ಮನಷ್ಯ ಮನುಷ್ಯತ್ವದ ಬಂಡಿಯಲ್ಲಿ ಸಾಧನೆಯ ಗುರಿ ತಲುಪುತ್ತಾನೆ. ಮಾನವೀತೆಯನ್ನು, ಜೀವನ ಪ್ರೀತಿಯನ್ನು ದರ್ಶಿಸುತ್ತಾ ಬಂದಿರುವುದು ಇದರಲ್ಲಿರುವ ಮಾನವೀಯ ಮೌಲ್ಯಗಳ ಪಾಕದ ಗಡಸು ಅರ್ಥಪೂರ್ಣವಾಗಿದೆ. ಆಧುನೀಕರಣ, ಸಾಮಾಜಿಕ ಜೀವನದ ವ್ಯಥ್ಯಯ, ಸಾಹಿತ್ಯದ ಮೇಲೆ ಎಷ್ಟೇ

ಪ್ರಭಾವ ಬೀರಿದರೂ ವಿಕ್ಷಿಪ್ತ ಪರಿಸರದಲ್ಲೂ ಸಮಚಿತ್ತದ ಹದವನ್ನು ಉಳಿಸಿಕೊಂಡು ಎಲ್ಲ ಬಗೆಯ ಅನುಭವ ವಲಯಗಳಿಗೂ ಮುಕ್ತವಾಗಿ ತೆರೆದುಕೊಂಡು ಕಾವ್ಯ ರಚಿಸುತ್ತಾ ಬಂದಿರುವುದು ಕಣವಿಯವರ ಕಾವ್ಯ ಪ್ರತಿಭೆ, ಭೌದ್ಧಿಕ ಪ್ರೌಢಿಮೆಗಳ ವಿಶಿಷ್ಟತೆ.
ಪ್ರಸ್ತುತ ಕಣವಿಯವರ 'ಭೂಮಿ–ಬದುಕು' ಸಂಕಲನದಲ್ಲಿರುವ ಸುನೀತಗಳು ಹಾಗೂ ಇಲ್ಲಿ ಕಂಡುಬರುವ ಕಣವಿಯವರ ಜೀವನ ಪ್ರೀತಿಯೊಂದಿಗೆ ಚಿಂತನೆಯ ಸ್ವಂತಿಕೆಯ ಹೊಳಹುಗಳನ್ನು ಗುರುತಿಸಬಹುದು. ಸುನೀತಗಳ ಬಳಕೆಯಲ್ಲಿ ಕಣವಿಯವರ ಬಗೆಗೆ ಕನ್ನಡ ವಿಮರ್ಶಾಲೋಕ ಸಾಕಷ್ಟು ಚರ್ಚಿಸಿ ಇವರು ಸಾಹಿತ್ಯದ ಅದ್ಭುತ ಕುಶಲಕರ್ಮಿತ್ವ, ಭಾಷೆಯ ಬಳಕೆ ಹಾಗೂ ಕಲೆಗಾರಿಕೆಗೆ ಹೆಮ್ಮೆಯನ್ನು ವ್ಯಕ್ತಪಡಿಸಿದೆ.

**ಅನಿಸುವದು ಒಮ್ಮೊಮ್ಮೆ:** ಕವನದಲ್ಲಿ ಜೀವನದ ದರ್ಶನ ಮಾರ್ಗದರ್ಶನ ಮೇಳೈಸಿ ಮನುಕುಲದ ನಡೆಗೆ ಸರಳತೆಯ ಶ್ರೇಷ್ಠತೆಯನ್ನು ಪ್ರಜ್ವಲಿಸಿದ್ದಾರೆ. ಪ್ರಸ್ತುತ ಸಾಮಾಜಿಕ ಜೀವನ ಉದಾತ್ತನೆ, ಘನತೆ, ಗಾಂಭೀರ್ಯ ನಡೆಗಳು ಕ್ಲಿಷ್ಟಕರವಾಗಿ ಪರಿಣಿಮಿಸುವುದು ಒಂದೆಡೆಯಾದರೆ ಮಾತಲ್ಲಿ ಆಚಾರ ಮನದಲ್ಲಿ ಆನಾಚಾರಗಳ ಗೂಡನ್ನೆ ನೆಯ್ದುಕೊಂಡಿರುವರು ಒಂದೆಡೆ ಕಾಣುತ್ತಾರೆ. ತಾನು ತನ್ನದೆಂಬ ಸ್ವಾರ್ಥ ಚಿಂತನೆಯಲ್ಲಿ ಪ್ರತಿಷ್ಠೆಯ ಶಿಖರವೇರುವ ತುಡಿತ ಕಾಣಸಿಗುತ್ತದೆ. ಇವುಗಳಿಗಿಂತ ಸರಳ ಬದುಕು, ಮೋಹಕ್ಕಿಂತ ಬದುಕಿನ ಅರ್ಥ ತಿಳುಹುಗಳ ಬದುಕು ಸರಳವಾದಂತೆ ಪಾರದರ್ಶಕವಾಗುತ್ತಾ ಸಮಾಜಹಿತವಾಗುತ್ತಾ ಸಾಗುತ್ತದೆ. 'ಗಾಂಧೀಜಿಯವರ ತಿಳಿಸುವಂತೆ ನಮ್ಮ ಯೋಚನೆಗಳು ಉನ್ನತವಾಗಿದ್ದು ಜೀವನ ಸರಳವಾಗಿದ್ದರೆ ಸಾಧಕನಿಗೆ ಸಾಧನೆ ಸಾಧ್ಯ' ವೆಂಬ ಮಾತನ್ನು ಇಲ್ಲಿ ಸ್ಮರಿಸುತ್ತಾ. ಮನುಷ್ಯ ತನ್ನ ಜೀವನವನ್ನು ಕ್ಲಿಷ್ಟಗೊಳಿಸಿಕೊಂಡು ಸಂಕಷ್ಟಕ್ಕೆ ಎಡೆಮಾಡಿಕೊಳ್ಳುವ ಬದಲು ಸರಳತೆಯ ಸೌಂದರ್ಯತೆಯನ್ನು ಪ್ರದರ್ಶಿಸಬೇಕೆಂದು ಕಣವಿಯವರ ಆಶಯವಾಗಿದೆ. ಕಣವಿಯವರ ಕವನದಲ್ಲಿ ಮನುಷ್ಯನ ಮನಸ್ಸಿನ ಹೊಳಹುಗಳನ್ನು ಅವುಗಳ ಪ್ರತಿ ಮಜಲುಗಳನ್ನು ದರ್ಶಿಸಿ ಮಾರ್ಗದರ್ಶಿಸುವ ಮಾನವತೆ ನಿಜಕ್ಕೂ ಶ್ಲಾಘನೀಯ. ಪ್ರಸ್ತುತ ಸಮಾಜದಲ್ಲಿ ಸ್ವಾರ್ಥಪರತೆ, ಪ್ರತಿಷ್ಠೆ, ಭ್ರಷ್ಟತೆ ತುಂಬಿ ಭೇದಗಳ ಸರಪಳಿಗೆ ಸಿಲುಕಿದ್ದಾನೆ. ಶಾಂತಿ, ನೆಮ್ಮದಿಗಳು ಕೇವಲ ಮಾತುಗಳಾಗಿವೆ ಆಂತರ್ಯವಲ್ಲಿ ಇಂತಹ ಸಂದರ್ಭಕ್ಕೆ ನಾವು ನಮ್ಮ ಈ ಸಾಹಿತ್ಯಗಳ ಪ್ರೀತಿ ಮಾರ್ಗದರ್ಶಿಯಾಗುವುದರಲ್ಲಿ ಸಂದೇಹವಿಲ್ಲ.